JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕಲ್ಯಾಣ ಪರಂಪರೆ ಮತ್ತು ಜನಪದ ಸಾಂಸ್ಕೃತಿಕ ಶರಣರು.

–ರೇವಣಸಿದ್ದಪ್ಪ. ಎಸ್.

12ನೆಯ ಶತಮಾನದ ಬಸವಕಲ್ಯಾಣ ಶಿವಶರಣರ ಕಾರ್ಯಕ್ಷೇತ್ರ. ತನ್ನ ಕಾಲದ ಲೌಕಿಕ ಅಧಿಕಾರವನ್ನು ಕಪಿಮುಷ್ಟಿಯಲ್ಲಿ ಹಿಡಿದುಕೊಂಡಿದ್ದ ವೈದಿಕ ವಿರೋಧವನ್ನು ಹಾಗೂ ರಾಜತ್ವದ ವಿರೋಧಿಗಳನ್ನು ಒಟ್ಟೊಟ್ಟಿಗೆ ನಿಭಾಯಿಸಿದ್ದ ವಚನ ಸಂಸ್ಕೃತಿಯ ಹೊಸ ಬದುಕಿನ ಪ್ರತಿಮೆಗಳನ್ನು ಸೃಷ್ಟಿಸಿತ್ತು. ಅಂದಿನ ಆ ಸಮಯಕಲ್ಯಾಣದ ಪರಂಪರೆ ಬಸವೋತ್ತರ ಯುಗದಲ್ಲಿ ಹಂಪಿಯಲ್ಲಿ ವಿಜಯಕಲ್ಯಾಣ, ಶಾಹಪುರ ತಾಲೂಕಿನ ದಿಗ್ಗಿಯಲ್ಲಿ ಅಮರಕಲ್ಯಾಣ, ನಾಗಾವಿಯಲ್ಲಿ ಧರ್ಮಕಲ್ಯಾಣ ಮತ್ತು ಯಾದಗಿರಿ ಜಿಲ್ಲೆಯ ಕೊಡೇಕಲ್ಲಿನಲ್ಲಿ ಕಡೆಯಕಲ್ಯಾಣ ಎಂಬ ಹೆಸರಿನಿಂದ ಬೆಳೆದುಬಂದಿದೆ. ಈ ಐದು ಕಲ್ಯಾಣದ ಬಸವತತ್ತ್ವ ಪ್ರತಿಪಾದಕರೇ ವೈಷ್ಣವರ ತತ್ತ್ವ ಸಿದ್ಧಾಂತಗಳಿಗೆ ವಿರುದ್ಧವಾಗಿ, ನೆಲಸಂಸ್ಕೃತಿಯ ಪ್ರತಿಪಾದಕರಾಗಿ ಸಂಗಮವಂಶದ ಹಕ್ಕ–ಬುಕ್ಕರಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ್ದರು. ಈ ಮೂಲಕ ಬಸವಕಲ್ಯಾಣದ ನಂತರ ಕಲ್ಯಾಣ ಪರಂಪರೆಯ ಎರಡನೆಯ ರಾಜಧಾನಿಯಾಗಿ ಹಂಪಿ ಅಥವಾ ವಿಜಯಕಲ್ಯಾಣ ಕಂಡುಬಂದಿತ್ತು.

ಮಧ್ಯಯುಗೀನ ದಕ್ಷಿಣ ಭಾರತದ ರಾಜಕೀಯ ಚರಿತ್ರೆಯಲ್ಲಿ ಕ್ರಿ.ಶ. 1194 ರಿಂದ 1336ರ ವರೆಗಿನ ಕರ್ನಾಟಕದ ಚರಿತ್ರೆ ಅಂದರೆ, ಬಸವಣ್ಣನ ಹತ್ಯೆ ಮತ್ತು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ವರೆಗಿನ ಈ ಒಂದೂವರೆ ಶತಮಾನದ ಸುಮಾರು 143 ವರ್ಷಗಳ ಕಾಲಘಟ್ಟದಲ್ಲಿ ಯಾವ ರಾಜಪ್ರಭುತ್ವವೂ ಸಾಮ್ರಾಜ್ಯವಾಗಿ ಆಳ್ವಿಕೆ ಮಾಡಲು ಸಾಧ್ಯವಾಗದ ಕಾಲಘಟ್ಟವೆನಿಸಿಕೊಂಡಿದೆ. ಅಂದರೆ, ಬಸವಣ್ಣನ ನಂತರದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆಗುವವರೆಗೂ ಯಾವುದೇ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರಲೇ ಇಲ್ಲ. ಕಾರಣ ಈ ಕಾಲಘಟ್ಟ ಮುಸ್ಲಿಂ ಪ್ರಭುತ್ವಗಳ ಆಕ್ರಮಣದ ಕಾಲಘಟ್ಟವಾಗಿ ಗುರುತಿಸಿಕೊಂಡಿದೆ. ಈ ಕಾಲಾವಧಿಯಲ್ಲಿ ಸಂಭವಿಸಿದ್ದ ಅಲ್ಲವುದ್ದೀನ್ ಖಿಲ್ಜಿಯ ದಕ್ಷಿಣ ಪಥದ ದಾಳಿಗಳು ಹಾಗೂ ಮಹಮದ್ ಬಿನ್ ತುಘಲಕ್‌ನ ವಿರುದ್ಧ ಬಹು ಉದ್ ದೀನ್ ಗುರುಷಾಸ್ಪಾನ್ ನಡೆಸಿದ್ದ ದಂಗೆಗಳು ದೇವಗಿರಿಯ ಯಾದವರು, ಕಂಪಿಲಿಯ ಕಂಪಿಲರಾಜ್ಯ, ದೋರಸಮುದ್ರದ ಹೊಯ್ಸಳರು ಹಾಗೂ ಓರಂಗಲ್ಲಿನ ಕಾಕತೀಯ ರಾಜ್ಯಗಳ ಅವನತಿಗೆ ಕಾರಣವಾಗಿದ್ದಂತೆ, ವಿಜಯನಗರ ಹಾಗೂ ಬಹಮನಿ ಸುಲ್ತಾನ ಸಾಮ್ರಾಜ್ಯಗಳ ಏಳಿಗೆಗೂ ಕಾರಣವಾಗಿದ್ದವು. ಈ ಸಂದರ್ಭದಲ್ಲಿದ್ದ, ಗೋವೆಯ ಕದಂಬರು, ವಾರಂಗಲ್ಲಿನ ಕಾಕತೀಯರು, ದೇವಗಿರಿಯ ಯಾದವರು ಮತ್ತು ದೋರಸಮುದ್ರದ ಹೊಯ್ಸಳರು ಮೊದಲಾದ ರಾಜಮನೆತನಗಳು ಪರಸ್ಪರ ಕಾದಾಟ ಹಾಗೂ ಮುಸ್ಲಿಂ ಆಕ್ರಮಣಗಳಿಂದ ತಮ್ಮ ತಮ್ಮ ರಕ್ಷಣೆಗಾಗಿಯೇ ಕಾದಾಟದಲ್ಲಿ ತೊಡಗಿದ್ದವು. ವಿಜಯನಗರದರಸರ ಕಾಲಕ್ಕೆ ಬಂದರೆ, ಸುಮಾರು ಎರಡು ಶತಮಾನದಷ್ಟು ಕಾಲ, ಈ ಪ್ರದೇಶ ಹಿಂದೂ–ಮುಸಲ್ಮಾನ ದೊರೆಗಳ ರಾಜಕೀಯ ಕಿತ್ತಾಟದ ರುದ್ರಭೂಮಿಯಾಗಿದ್ದಂತೂ ಸುಳ್ಳಲ್ಲ.

ಮಧ್ಯಯುಗೀನ ಕರ್ನಾಟಕದ ರಾಜಕೀಯ ಅರಾಜಕತೆಯ ಸಾಮ್ರಾಜ್ಯಶೂನ್ಯ ಸಂದರ್ಭವನ್ನು ತುಂಬಲು ಪುನಃ ಬಸವತತ್ತ್ವ ಹಾಗೂ ಶೈವಪಂಥದ ಅನುಯಾಯಿಗಳಾಗಿದ್ದ ಹಕ್ಕ–ಬುಕ್ಕರು ಬಸವತತ್ತ್ವದ ಹಿನ್ನೆಲೆಯಿಂದಲೇ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಬೇಕಾಯಿತು. ಮುಂದವರೆದು ಹೇಳುವುದಾದರೆ, ಬಸವಣ್ಣನ ವಚನದ ಅಂಕಿತವಾದ 'ಕೂಡಲಸಂಗಮ' ಎಂಬ ಅಂಕಿತವೇ 'ಸಂಗಮ' ವಂಶದ ಹೆಸರಿಗೂ ಕಾರಣ ಎಂದು ಹೇಳಬಹುದಾದ ಸಂದರ್ಭವಿಲ್ಲದಿಲ್ಲ. ಕಾಯಕ ತತ್ತ್ವದ ಮೇಲೆ ಸ್ಥಾಪನೆಯಾಗಿದ್ದ ಸಂಗಮ – ಸಾಳುವ ವಂಶಾಡಳಿತದಲ್ಲಿ ಅಂದರೆ, ಕ್ರಿ.ಶ. 1336 ರಿಂದ 1503ರ ವರೆಗೆ ಶೈವ ದೇವಾಲಯಗಳನ್ನು ಹೊರತುಪಡಿಸಿ ಒಂದೇ ಒಂದು ವೈಷ್ಣವ ದೇವಾಲಯಗಳು ಕಂಡುಬರುವುದಿಲ್ಲ. ಹೊಯ್ಸಳರ ಬಿಟ್ಟಿದೇವ ವಿಷ್ಣುವರ್ಧನನಾಗಿದ್ದ ಸಂದರ್ಭದಂತ ಸಂದರ್ಭ ಕ್ರಿ.ಶ. 1503 ರಿಂದ 1565ರ ವರೆಗೆ ಶ್ರೀಕೃಷ್ಣದೇವರಾಯನ ಮೂಲಕ ಕಂಡುಬಂದಿತ್ತು. ಈ ಅವಧಿಯಲ್ಲಿ ಶೈವ ಮತ್ತು ವೀರಶೈವ, ಶೈವ ಮತ್ತು ಲಿಂಗಾಯತ ಪರಂಪರೆಯ ಆಳ್ವಿಕೆಯನ್ನು ಕೊನೆಗಾಣಿಸಿ, ಕ್ರಿ.ಶ. 1500ರಲ್ಲಿ ಉತ್ತರಭಾರತದಲ್ಲಿ ಮೊಘಲರು ಆಳ್ವಿಕೆಯನ್ನು ಆರಂಭಮಾಡಿದ್ದರ ಕಾರಣಕ್ಕಾಗಿ, ಕ್ರಿ.ಶ. 1509ರಿಂದ 1556ರ ವರೆಗೆ ವಿಜಯನಗರ ಸಾಮ್ರಾಜ್ಯ ವೈದಿಕರ ಕೈಗೆ ಬಂದಿತ್ತು. ಇಲ್ಲಿಂದ ಶೈವ ಸಾಮ್ರಾಜ್ಯ ವೈಷ್ಣವ ಸಾಮ್ರಾಜ್ಯವಾಗಿ ಬದಲಾಗಿತ್ತು.

ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಕಾಲದಲ್ಲಿ ಶೈವಧರ್ಮದ ಸಹಪಾಠಿಯಾಗಿ ಶ್ರೀವೈಷ್ಣವಧರ್ಮ ನೆಲೆಗೊಂಡು ಪ್ರಬಲವಾಗುತ್ತಾ ಸಾಗಿದಂತೆ, ವಿಜಯನಗರ ಸಾಮ್ರಾಜ್ಯದಲ್ಲಿ ಬಸವ ತತ್ತ್ವದ ಅನುಯಾಯಿಗಳು ಹುಟ್ಟಿಕೊಂಡರು. ಅವರೆಂದರೆ,

ಕೊಡೇಕಲ್ಲ ಬಸವಣ್ಣ, ಮಾದಪ್ಪ, ಮಂಟೆಸ್ವಾಮಿ, ನಾಯಕನಹಟ್ಟಿ ತಿಪ್ಪೆಸ್ವಾಮಿ, ರಾಚಪ್ಪಾಜಿ, ಸಿದ್ಧಪ್ಪಾಜಿ, ಕೊಟ್ರಪ್ಪ ಮೊದಲಾದವರು. ಇವರೆಲ್ಲ ಕಾಯಕ ತತ್ತ್ವವನ್ನು ಪ್ರತಿಪಾದನೆ ಮಾಡುವವರಾಗಿದ್ದರು. ಇವರೆಲ್ಲಾ, ವಿಜಯನಗರೋತ್ತರ ಕಾಲದ ಬಹು ದೊಡ್ಡ ಬಸವ ತತ್ತ್ವದ ಅನುಯಾಯಿಗಳಾಗಿದ್ದ ಇವರು ಈಗಾಗಲೆ, ಕರ್ನಾಟಕದ ಉತ್ತರ ಭಾಗದಲ್ಲಿ ಪ್ರಸಿದ್ಧವಾಗಿ, ಪ್ರಬಲವಾಗಿದ್ದ ಲಿಂಗಾಯತ ಪರಂಪರೆಯ ತತ್ತ್ವ ಸಿದ್ಧಾಂತಗಳನ್ನು ದಕ್ಷಿಣ ಭಾಗದಲ್ಲಿ ಪ್ರಚುರಪಡಿಸಲು ಮುಂದಾಗಿದ್ದರು. ಇವರ್ಯಾರೂ ಬಸವಣ್ಣನ ಕಾಲದಲ್ಲಿದ್ದವರಲ್ಲ ಆದರೆ, ಬಸವಣ್ಣನ ತತ್ತ್ವ ಪ್ರಚಾರಕರಾಗಿ 15 ಮತ್ತು ಕ್ರಿ.ಶ. 16ನೆಯ ಶತಮಾನಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವರಾಗಿದ್ದಾರೆ.

ತುಂಗಭದ್ರನದಿಯ ಕೆಳಗಡೆ ಒಬ್ಬ ವಚನಕಾರನೂ ಕಂಡುಬರುವುದಿಲ್ಲ ಏಕೆ? ಮೈಸೂರು ಪ್ರಾಂತ್ಯ ಅತ್ಯಂತ ಮುಂದುವರೆದ ಕಾಲಘಟವಾಗಿದ್ದರೂ ಉತ್ತರ ಕರ್ನಾಟಕದಲ್ಲಿ ಕಂಡುಬಂದ ಶಿಶುನಾಳ ಶರೀಫರಂತ ತತ್ವಪದಕಾರರು ಏಕೆ ಕಂಡುಬರಲಿಲ್ಲ? ಏಕೆಂದರೆ, ಈ ಭಾಗದಲ್ಲಿದ್ದುದು ವೈದಿಕ ಪರಂಪರೆಯ ಹಿಡಿತ, ಅಂತಹ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿರಲಿಲ್ಲ. ಈ ಭಾಗದಲ್ಲಿ ಕೊಡೇಕಲ್ಲ ಬಸವಣ್ಣ, ಮಾದಪ್ಪ, ಮಂಟೆಸ್ವಾಮಿ, ನಾಯಕನಹಟ್ಟಿ ತಿಪ್ಪೆಸ್ವಾಮಿ, ರಾಚಪ್ಪಾಜಿ, ಸಿದ್ಧಪ್ಪಾಜಿ, ಕೊಟ್ರಪ್ಪ ಮೊದಲಾದ ಬಸವ ತತ್ತ್ವದ ಅನುಯಾಯಿಗಳು, ಕಾಯಕ ತತ್ತ್ವವನ್ನು ಪ್ರತಿಪಾದನೆ ಮಾಡಿ ಸಮಸಮಾಜ ಸಂಸ್ಕೃತಿಯನ್ನು ಪ್ರತಿಪಾದನೆ ಮಾಡುವ ಮೂಲಕ ಜಾನಪದ ಆರಾಧ್ಯದೈವಗಳಾಗಿ ಮಾರ್ಪಟ್ಟಿದ್ದಾರೆ. ಈ ಭಾಗದಲ್ಲಿ ವೈದಿಕತೆಯ ಹಿಡಿತದಲ್ಲಿದ್ದು ಕೇವಲ ಜಾತಿಯ ಜನರಾಗಿದ್ದ ತಳಸಮುದಾಯ ಅಥವಾ ಜನಸಾಮನ್ಯರನ್ನು ಧರ್ಮದ ಜನರನ್ನಾಗಿ ಪರಿವರ್ತಿಸಲು ಈ ಎಲ್ಲಾ ಬಸವಾನುಯಾಯಿಗಳು ಶ್ರಮಿಸಿದ್ದರು. ಆದ್ದರಿಂದ ಇವರು ಸಾಧಿಸಿದ್ದ ಸಾಧನೆಗಳನ್ನು ಈ ಭಾಗದ ಜನರು ಇಂದಿಗೂ ತತ್ತ್ವಪದಗಳ ಮೂಲಕ ಜೀವಂತವಾಗಿರಿಸಿ ಕೊಂಡಿರುವುದನ್ನು ಕಾಣಬಹುದಾಗಿದೆ. ವಿಜಯನಗರ ಪತನಾನಂತರ ಸಂಭವಿಸಿದ ಇಂಥ ಅನೇಕ ಸಾಂಸ್ಕೃತಿಕ ಪಲ್ಲಟಗಳನ್ನು ಗ್ರಹಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.[1]

ವಿಜಯನಗರ ಪತನಾನಂತರದ ಕಾಲಘಟ್ಟದಲ್ಲಿ ಹಲವಾರು ಜನಪದ ಸಾಂಸ್ಕೃತಿಕ ಶರಣರು ಕಂಡುಬರುತ್ತಾರೆ. ಅವರುಗಳಲ್ಲಿ ನಾಯಕನಹಟ್ಟಿ ತಿಪ್ಪೇಸ್ವಾಮಿ, ಪಾಪೇನಾಯಕ, ಗಾದ್ರಿಪಾಲನಾಯಕ, ಮಂಟೆಸ್ವಾಮಿ, ಮಾದೇಶ್ವರ, ಜುಂಜಪ್ಪ, ನಾಯಕನಹಟ್ಟಿ ತಿಪ್ಪೆಸ್ವಾಮಿ, ರಾಚಪ್ಪಾಜಿ, ಸಿದ್ಧಪ್ಪಾಜಿ, ಕೊಟ್ರಪ್ಪ ಮೊದಲಾದವರು ಪ್ರಮುಖರು. ಈ ಜನಪದ ಸಾಂಸ್ಕೃತಿಕ ಶರಣರಿಗೆ ಯಾವುದೇ ಮತಧರ್ಮ ಸ್ಥಾಪನೆ ಗುರಿಯಾಗಿರುವುದಿಲ್ಲ. ಎಂಬುದನ್ನು ಗಮನಿಸಬೇಕಾಗಿದೆ. ಅಲ್ಲದೇ ಭಾರತದಲ್ಲಿ ಬಂದ ಯಾವುದೇ ಪ್ರಮುಖ ಧರ್ಮದ ಪರವಾಗಿ ನಿಂತು ಅವರು ಹೋರಾಡಿದಂತೆಯೂ ಕಂಡುಬರುವುದಿಲ್ಲ. ಆದರೆ ಕಾಯಕ ನಿಷ್ಠೆಯ ತತ್ತ್ವವೇ ಅವರಿಗೆ ಮುಖ್ಯವಾಗಿದ್ದಂತೆ ತೋರುತ್ತದೆ.

ಭರತಖಂಡದಲ್ಲಿ ಬಂದ ಧಾರ್ಮಿಕ ಪರಂಪರೆಯಲ್ಲಿ ಬಂದ ಬುದ್ಧ, ಮಹಾವೀರ, ಬಸವಣ್ಣ, ರಾಮಾನುಜಾಚಾರ್ಯ, ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದವರ ಹೆಸರಿನಲ್ಲಿಯೇ ಹೊಸ ಮತಗಳು ಸೃಷ್ಟಿಯಾಗಿವೆ. ಇವರು ಸ್ಥಾಪಿಸಿದ ಮತಗಳ ನಡುವೆ ಸ್ಪರ್ಧೆಗಳೂ ಏರ್ಪಟ್ಟಿದ್ದವು. ಆದರೆ, ಜನಪದ ಸಾಂಸ್ಕೃತಿಕ ಶರಣರು ಭಾರತದ ಪರಂಪರೆಯಲ್ಲಿ ಬಂದ ಯಾವ ಧರ್ಮವನ್ನೂ ನಿಶ್ಚಳವಾಗಿ ಅನುಕರಿಸಿದಂತೆ ಕಂಡುಬರುವುದಿಲ್ಲ.[2] ಆದರೆ, ಜನರು ಇಂದಿಗೂ ತತ್ತ್ವಪದಗಳ ಮೂಲಕ ಜೀವಂತವಾಗಿರಿಸಿ ಕೊಂಡಿರುವುದನ್ನು ಕಾಣಬಹುದಾಗಿದೆ. ಮಾದೇಶ್ವರನ ಆರಾಧಕರನ್ನು ಕಂಸಾಳೆಯವರು ಮತ್ತು ಮಂಟೆಸ್ವಾಮಿಯ ಆರಾಧಕರನ್ನು ನೀಲಗಾರರೆಂದು ಕರೆಯಲಾಗುತ್ತದೆ. ಕೊಡೇಕಲ್ಲ ಪರಂಪರೆ ತಾತ್ವಿಕವಾಗಿ ಶರಣರ ಮುಂದುವರಿಕೆಯಂತೆ ಕಂಡುಬರುವುದಿಲ್ಲ. ಶರಣರ ಜತೆಯಿದ್ದ ಅಲ್ಲಮಪ್ರಭು ಶಾಖೆಯ ನಾಥಸಿದ್ಧ ಹಾಗೂ ಸೂಫಿಗಳ ಸಹಜೀವನದಿಂದ ಹುಟ್ಟಿದ ಪರಂಪರೆ. ಮಂಟೆಸ್ವಾಮಿ ಕೊಡೇಕಲ್ಲ ಪರಂಪರೆಯ ಕವಲು. ಮಂಟೆಸ್ವಾಮಿ ಪರಂಪರೆ ಶರಣರ ಲಿಂಗಧಾರಣಾ ಆಚರಣೆಯನ್ನು ನಿಷ್ಠುರ ವಿಮರ್ಶೆಗೊಳಪಡಿಸಿದ ಪರಂಪರೆಯಾಗಿದೆ.

ಇಷ್ಟಲಿಂಗ ಮತ್ತು ಜಂಗಮ ಪರಿಕಲ್ಪನೆಗಳು ಮೂಲ ಮಾತೃಕೆಗಳಾಗಿ ಎಲ್ಲಿಲ್ಲದ ಮಹತ್ವ ಪಡೆದುಕೊಂಡಿದ್ದ ಬಸವಕಲ್ಯಾಣ ಪರಂಪರೆ ಮಠೀಯವಾಗುತ್ತ, ಲಿಂಗಾಯತ ಜಾತಿಯಾಗುತ್ತ ಹೋದ ಶರಣರಿಗೆ ಅನುಭಾವಿಗಳು ಕೊಟ್ಟ ಉತ್ತರದಂತೆ ಮಂಟೆಸ್ವಾಮಿ ಪರಂಪರೆ ಕಂಡುಬರುತ್ತದೆ. ಶರಣರಲ್ಲಿ ಲಿಂಗಧಾರಣೆಯ ದೀಕ್ಷೆಯಿದ್ದರೆ, ಕೊಡೇಕಲ್ಲು ಹಾಗೂ ಮಂಟೆಸ್ವಾಮಿ ಪರಂಪರೆಯಲ್ಲಿ ಲಿಂಗತ್ಯಾಗದ ಮೂಲಕ ದೀಕ್ಷೆ ನಡೆಯುತ್ತದೆ. ಇದನ್ನು ಭಾವಲಿಂಗ ಅಥವಾ ಹಸ್ತಮಸ್ತಕ ಎಂದು ಕರೆಯುತ್ತಾರೆ. ಶರಣ ಪರಂಪರೆಯಲ್ಲಿ ಇಷ್ಟಲಿಂಗವಿರುವ ಜಂಗಮರಿದ್ದರೆ; ಕೋಡೆಕಲ್ಲು ಪರಂಪರೆಯಲ್ಲಿ ಲಿಂಗವಿಲ್ಲದೆ 'ಬೋಳ ಜಂಗಮರ' ಪರಂಪರೆ ಇದೆ.[3] ಬಹುಶಃ ಕ್ರಿ.ಶ. 12ನೆಯ ಶತಮಾನದ ಬಳಿಕ ಬಸವಧರ್ಮದಲ್ಲಿ ಲೀನವಾಗಿದ್ದ ಆಗಮಿಕ ಶಿವಾಚಾರ್ಯರು, ಪ್ರೌಢದೇವರಾಯನ ರಾಜಾಶ್ರಯ ಕಾರಣವಾಗಿ ತಮ್ಮ ಪುರೋಹಿತ ಪ್ರಜ್ಞೆಯನ್ನು ಬೆಳೆಸಿಕೊಂಡು ಇಷ್ಟಲಿಂಗವನ್ನು ಎಲ್ಲರಿಗೂ ನೀಡಿದ್ದ ಕಾರಣ, ಸಮಾಜ ಉಡಿಯ ಲಿಂಗವ ಬಿಟ್ಟು, ಗುಡಿಯಲಿಂಗವ ನಂಬಿ ನಡೆಯುವ ಭಕ್ತಸಮೂಹದ ಕೇಂದ್ರವಾಗಿತ್ತು. ಇದರಿಂದ ಲಿಂಗಾಯತವು ತನ್ನ ಮೂಲ ಅರ್ಥ ಕಳೆದುಕೊಂಡು ಮತ್ತೆ ತರತಮ ವ್ಯವಸ್ಥೆಗೆ ಬೆಳೆದು ನಿಂತಿತು. ಆಗ ಒಳಗೆ ಸೇರಿದ್ದ ಅನೇಕ ಜಾತಿಗಳಲ್ಲಿ ಕೆಲವರು ಇಷ್ಟಲಿಂಗದಿಂದ ದೂರ ಸರಿದು ಬಾವಲಿಂಗವನ್ನು ಪ್ರತಿಪಾದಿಸಿದರು. ಇವರೇ ನೂರೊಂದು ವಿರಕ್ತರು. ಈ ವಿರಕ್ತರು ಶರಣ ಸಂಪ್ರದಾಯದ ವಿರಕ್ತರಲ್ಲ; ಶಾಂತ ಸಂಪ್ರದಾಯದ ಅವಧೂತರು.[4]

ಈ ಸಂಪ್ರದಾಯವನ್ನು ಹೊತ್ತು ಕಲ್ಯಾಣದಿಂದ ಕೊಡೇಕಲ್ಲಿಗೆ ಹೋದವನು ಕೊಡೇಕಲ್ಲ ಬಸವಣ್ಣ. ಕೊಡೇಕಲ್ಲ ಪರಂಪರೆಯ ಹರಿಕಾರನಾದ ಕೊಡೇಕಲ್ಲ ಬಸವಣ್ಣನು ಹಂಪಿಯ ಪರಂಪರೆಯ ನೆಲೆಯಿಂದಲೇ ಬಂದಿರುವುದರಿಂದ ವಿಜಯಕಲ್ಯಾಣದ ಚಟುವಟಿಕೆಗಳ ಎಲ್ಲ ಆಶಯವನ್ನು ಗ್ರಹಿಸಿದ್ದನು. ಕೊಡೇಕಲ್ಲ ಪರಂಪರೆಯಲ್ಲಿ ವಚನ ಸಾಹಿತ್ಯವು ಮುಖ್ಯ ಅವಧಾರಣೆಗೆ ಒಳಗಾಯಿತು. ವಚನಗಳನ್ನು ಅನುಸರಣೆ ಮಾಡುವ ತತ್ತ್ವವನ್ನಾಗಿ ಮಾತ್ರ ಸ್ವೀಕರಿಸಿದೆ ಹೊಸದಾಗಿ ತಾವೂ ವಚನಗಳನ್ನು ಬರೆಯಲು ಈ ಪರಂಪರೆಯವರು ಮುಂದಾದರು. ಕಾಲಮಾನದ ಎಲ್ಲ ಒತ್ತಡಗಳನ್ನು ತಮ್ಮ ಹೊಸ ಕಾಲದ ಅರಿವಿನಲ್ಲಿ ವಚನವಾಗಿಸಿದರು. ಅವು ಕಾಲದ ಜ್ಞಾನವನ್ನು ಇಟ್ಟುಕೊಂಡು ಚರಿತ್ರೆಯ ಸಂಪರ್ಕ ಹಾಗೂ ಸಂದರ್ಭಗಳಲ್ಲಿ ಹುಟ್ಟಿದ್ದರಿಂದ ಕಾಲಜ್ಞಾನ ವಚನಗಳೆಂದು ಪ್ರಸಿದ್ಧಿಯಾದವು.[5]

ಕ್ರಿ.ಶ. 12ನೆಯ ಶತಮಾನದ ಮೂಲ ವಚನಗಳಂತೆ ಕ್ರಿ.ಶ. 15, 16ನೆಯ ಶತಮಾನದ ಸಾಂಸ್ಕೃತಿಕ ಒತ್ತಡದಲ್ಲಿ ಈ ಕಾಲಜ್ಞಾನ ವಚನ ವಾಕ್ಯಗಳನ್ನು ಬರೆಯಲಾಯಿತು. ಬರೆದ ವಚನ ವಾಕ್ಯಗಳನ್ನು ಕಾಲದ ಬದುಕಿನಲ್ಲಿ ಒಂದಾಗಿಸಲು ಮೌಖಿಕವಾಗಿ ಡಂಗುರ ಹಿಡಿದು ಸಾರುವ ಪ್ರಕ್ರಿಯೆಯನ್ನು ಜಾರಿಗೊಳಿಸಲಾಯಿತು. ನುಡಿ ಕಟ್ಟುವವರು, ನುಡಿಸಾರುವವರು ಹೀಗೆ ದೊಡ್ಡ ಪಡೆಯೇ ಹುಟ್ಟಿಕೊಂಡಿತು. ಈ ಪರಂರೆಯಲ್ಲಿ ಡಂಗುರ ಶಾಂತ, ಕೋಲ ಶಾಂತ ಹೀಗೆ 'ಶಾಂತ' ಎಂಬ ವಿಶೇಷಣದಿಂದ ಕರೆಯಲ್ಪಡುವವರಿದ್ದಾರೆ. ಇವರನ್ನು ಶಾಂತ ಲಿಂಗಾಯತರೆಂದು ಕರೆಯಲಾಗುತ್ತದೆ. ಕಾರಣ, ಈ ಸಂಪ್ರದಾಯದವರು ಇಷ್ಟಲಿಂಗವನ್ನು ನಿಷ್ಠೆಯಿಂದ ಜಂಗಮಲಿಂಗವನ್ನಾಗಿಸಿದ ಬಸವಕಲ್ಯಾಣದ ಶರಣಲಿಂಗಾಯತ ಪಂಥದ ಜಂಗಮಲಿಂಗದ ಆಶಯ ಹಂಪಿಯಲ್ಲಿ ಮರೆಯಾಗಿ ಸ್ಥಾವರಲಿಂಗಕ್ಕೆ ಮಹತ್ವ ದೊರಯಿತು. ಇದರಿಂದ ಶಾಂತ ಸಂಪ್ರದಾಯದವರು ಬಹಿರಂಗದಲ್ಲಿ ಲಿಂಗವನ್ನು ಬಿಟ್ಟು ಅಂತರಂಗದಲ್ಲಿ ಅಷ್ಟಾವರಣವನ್ನು ಆಚರಿಸುವಂತಾಯಿತು. ಇದರಿಂದ ಇವರು ಶಾಂತ ಸಂಪ್ರದಾಯದ ಲಿಂಗಾಯತರೆನಿಸಿಕೊಂಡಿದ್ದಾರೆ.[6]

ಈ ಹೊಸ ಸಂಪ್ರದಾಯದಲ್ಲಿ ಎದ್ದು ಕಾಣುವ ಕರಸ್ಥಲದ ನಾಗಲಿಂಗಚಾರ್ಯ ಪಾಂಚಾಳ ಮೂಲದವನು. ಇದರ ಮುಂದುವರಿಕೆಯಂತೆ ಕೊಡೇಕಲ್ಲ ಬಸವಣ್ಣನ ಪರಂಪರೆ ಕಂಡುಬರುತ್ತದೆ. ಕೊಡೇಕಲ್ಲ ಪರಂಪರೆಯು ಚಲನಶೀಲವಾಗಿ ಇಂದಿಗೂ ಮುಂದುವರೆದುಕೊಂಡು ಬಂದಿದೆ. ಅಲ್ಲಿನ ನಾಯಕರು ಸಾಂಸ್ಕೃತಿಕವಾಗಿ ಜನಸಮುದಾಯಗಳ ದೈವಗಳಾಗಿರುವುದರಿಂದ ಅವರ ಗುಡಿಗಳು ಅವರು ಸುತ್ತಾಡಿದ ಪ್ರದೇಶಗಳಲ್ಲೆಲ್ಲ ಹರಡಿಕೊಂಡಿವೆ.[7] ಈ ಹಿನ್ನೆಲೆಯಲ್ಲಿ ಕೊಡೇಕಲ್ಲನ್ನು ಕೇಂದ್ರ ಮಾಡಿಕೊಂಡು ಕರ್ನಾಟಕ ಸಂಸ್ಕೃತಿ ಚರಿತ್ರೆಯ ಸಾಮಾಜಿಕ ಹಾಗೂ ರಾಜಕೀಯ ಸ್ವರೂಪವನ್ನು ರೇಖಿಸಲು ಸಾಧ್ಯವಿದೆ.

**ಅಡಿ ಟಿಪ್ಪಣಿಗಳು:**

1. ಸಂದರ್ಶನ, ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿವಿ, ಹಂಪಿ. 03–07–2023.
2. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಚಿರಿತ್ರೆ, ಸಂಪುಟ – 4, 2001, ಪ್ರಸಾರಾಂಗ, ಕನ್ನಡ ವಿವಿ, ಹಂಪಿ. ಪು. 426.
3. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪು. 81.
4. ರವೀಂದ್ರನಾಥ. ಕೆ., 2023, ವಿಜಯನಗರ ಸಾಹಿತ್ಯ–ಸಂಸ್ಕೃತಿ, ದಾಸೋಹಿ ಪ್ರಕಾಶನ, ಕಾನಮಡುಗು. ಪು. 83.
5. ಶಿವಾನಂದ ಎಸ್. ವಿರಕ್ತಮಠ., 2016, ಕೊಡೇಕಲ್ಲ ರಾಚಪ್ಪಯ್ಯ: ಒಂದು ಅಧ್ಯಯನ, ಶ್ರೀಮುರುಘಾರಾಜೇಂದ್ರ ಗ್ರಂಥಮಾಲೆ, ಶ್ರೀಮುರುಘಾಮಠ, ಚಿತ್ರದುರ್ಗ. ಪು. 02.
6. ರವೀಂದ್ರನಾಥ. ಕೆ., 2023, ವಿಜಯನಗರ ಸಾಹಿತ್ಯ–ಸಂಸ್ಕೃತಿ, ದಾಸೋಹಿ ಪ್ರಕಾಶನ, ಕಾನಮಡುಗು. ಪು. 84.
7. ಬಸವಲಿಂಗ ಸೊಪ್ಪಿನಮಠ, 2016, ಕೊಡೇಕಲ್ಲ ಬಸವಣ್ಣ: ಒಂದು ಅಧ್ಯಯನ, ಶ್ರೀಮುರುಘಾರಾಜೇಂದ್ರ ಗ್ರಂಥಮಾಲೆ, ಶ್ರೀಮುರುಘಾಮಠ, ಚಿತ್ರದುರ್ಗ. ಪು. 02.